ಪ್ರಪತ್ರ ಕ್ರಮಾಂಕ (೧೪)

# ನೋಂದಣಿ ಪ್ರಮಾಣ ಪತ್ರ ರ.ನಂ: 38/87-88

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ (೧೯೬೦ ನೇಯ ಇಸವಿ ೧೭ನೇದು ಕ್ರಮಾಂಕದ ಕರ್ನಾಟಕ ಅಧಿನಿಯಮದ)

ಮೇರೆಗೆ ಕೃಷ್ಣಾ ತೀರ ರೈತ ಸಂಘ, ಜಮಖಂಡಿ,

[illegible] ಜಮಖಂಡಿ

ತಾಲೂಕ:- ಜಮಖಂಡಿ.

ಜಿಲ್ಲೆ: ವಿಜಾಪುರ

ಎಂಬ ಸಂಘವು ಇಂದು ನೋಂದಾಯಿಸಲ್ಪಟ್ಟಿರುತ್ತದೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂದಾಯವಾದ ಶುಲ್ಕ ರೂಪಾಯಿಗಳು ಐವತ್ತು (ಮಾತ್ರ)

ವಿಜಾಪುರ ದಲ್ಲಿ ಒಂದು ಸಾವಿರದ ಒಂಬೈನೂರ ಎಂಬತ್ತೇಳನೇ ಇಸವಿ ಜೂನ

ತಿಂಗಳು [illegible] ದಿನಾಂಕದಂದು ನಾನು ಸಹಿ ಹಾಕಿಕೊಟ್ಟಿದ್ದೇನೆ.

ಜಿಲ್ಲಾ ... ಸಂಘಗಳ ... ವಿಜಾಪುರ

The Registrar of Societies Bijapur District, Bijapur.

for Registrar of Societies
ಸಂಘಗಳ ... ಕರ್ನಾಟಕ ...

# ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ಉಪನಿಬಂಧಕರು &
ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳ
ಕಛೇರಿ, ಜಿಲ್ಲಾ ಆಡಳಿತ ಭವನ, ನವನಗರ,
ಕೊಠಡಿ ಸಂಖ್ಯೆ: 138, 139.
ಬಾಗಲಕೋಟ-587103.

ನೋಂದಣಿ ಸಂಖ್ಯೆ:38/1987-88

ವಾಲೆಪ ಸಂಖ್ಯೆ:ಡಿಆರ್‌ಬಿಜೆಕೆ: 38/24-25

ದಿನಾಂಕ: 16-05-2024

ದೂರವಾಣಿ: *235056(08354)* E-mail: drcs-bagalkote-ka@nic.in.

-: ಸ್ವೀಕೃತಿ ಪತ್ರ :-

ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960 ರ ಕಲಂ 13 ರನ್ವಯ ಸಲ್ಲಿಸಬೇಕಾದ ಸನ್ **2022-23** ನೇ ಸಾಲಿನ ಲೆಕ್ಕಪತ್ರಗಳು / ಸರ್ವ ಸದಸ್ಯರ ಸಭೆಯ ನಡವಳಿಕೆ **2023-24** ನೇ ಸಾಲಿನ ಕಾರ್ಯಕಾರಿ ಸಮಿತಿ ಪಟ್ಟಿಯನ್ನು **ಕೃಷ್ಣಾ ತೀರ ರೈತ ಸಂಘ.(ರಿ) ಜಮಖಂಡಿ ತಾ: ಜಮಖಂಡಿ ಜಿ: ಬಾಗಲಕೋಟ,**ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರು ದಿನಾಂಕ:02/05/2024 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ದಸ್ತಾವೇಜುಗಳನ್ನುದಿನಾಂಕ:16/05/2024 ದಾಖಲಿಸಿದೆ.ಪಾವತಿಸಬೇಕಾದ ಶುಲ್ಕ ರೂಪಾಯಿ. 39920-00 ಗಳನ್ನು (ಅಕ್ಷರಗಳಲ್ಲಿ ಮೂವತ್ತೊಂಭತ್ತು ಸಾವಿರದಾ ಒಂಭತ್ತು ನೂರಾ ಇಪ್ಪತ್ತು. ರೂಪಾಯಿಗಳು) ಮಾತ್ರ ಪಾವತಿಸಿರುತ್ತಾರೆ.

<u>ಈ ಸ್ವೀಕೃತಿ ಪತ್ರ ಕೆಳಕಂಡ ಷರತ್ತಿಗೆ ಒಳಪಟ್ಟಿರುತ್ತದೆ.</u>

1) ಸಂಘದ ಚಟುವಟಿಕೆಗಳು ಸಾರ್ವಜನಿಕರ ಹಿತಾಸಕ್ತಿಗೆ ಹಾಗೂ ಕಾನೂನಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಕಂಡು ಬಂದರೆ.
2) ಸಂಘದ ಬಗ್ಗೆ ನ್ಯಾಯಾಲಯಗಳಲ್ಲಿ ಅಥವಾ ಯಾವುದೇ ಅಧಿಕಾರಿಯವರ ಮುಂದೆ ವಿಚಾರಣೆ ನಡೆದು ಸಂಘವು ಸಲ್ಲಿಸಿರುವ ಪ್ರಸ್ತುತ ದಾಖಲೆಗಳು ಸಿಂಧುವಲ್ಲವೆಂದು ದೃಢಪಟ್ಟರೆ.
3) ಸಂಘದಲ್ಲಿ ಸ್ವೀಕರಿಸಿರುವ ಎಲ್ಲಾ ರೀತಿಯ ವಂತಿಗೆ ಹಾಗೂ ಸದಸ್ಯತ್ವ ಶುಲ್ಕವನ್ನು ಸಂಘದ ಉದ್ದೇಶಗಳಿಗಾಗಿ ಬಳಸದೆ, ಯಾವುದೇ ರೀತಿಯ ಹಣ ದುರುಪಯೋಗವಾಗಿದೆ ಎಂದು ಕಂಡು ಬಂದರೆ.
4) ಸಂಘವು ನೀಡಿರುವ ದಾಖಲಾತಿಗಳಲ್ಲಿ ಯಾವುದೇ ರೀತಿಯ ಆಕ್ಷೇಪಣೆಗಳು / ಲೋಪದೋಷಗಳು ಕಂಡು ಬಂದಲ್ಲಿ ಅಥವಾ ಸಂಘಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ದೂರುಗಳು ಸಾಬೀತಾದಲ್ಲಿ.
5) ಲೆಕ್ಕಪತ್ರಗಳು ಅಥವಾ ಆದಾಯ ಮತ್ತು ವೆಚ್ಚಗಳಲ್ಲಿ ತಪ್ಪು ಮಾಹಿತಿ ನೀಡಿ ಸರ್ಕಾರಕ್ಕೆ ಪಾವತಿಸಬೇಕಾದ ಶುಲ್ಕದಲ್ಲಿ ಕಡಿಮೆ ಪಾವತಿಯಾಗಿದೆ ಎಂದು ಸಾಬೀತಾದಲ್ಲಿ ಈ ಸ್ವೀಕೃತಿಯನ್ನು ರದ್ದುಪಡಿಸಲಾಗುವುದು.

16/5/24

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು,
ಹಾಗೂ ಸಹಕಾರ ಸಂಘಗಳ ಉಪನಿಬಂಧಕರು
ಬಾಗಲಕೋಟೆ ಜಿಲ್ಲೆ ಬಾಗಲಕೋಟೆ

Seal of the Registrar of Societies, Bagalkote

## ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಜಮಖಂಡಿ , ಜಿ : ಬಾಗಲಕೋಟ

ನಂ: ಎ2: ಹೊಸ : ಖಾಪ್ರಾಶ : ಪ್ರಾರಂಭ ಅನುಮತಿ 2005-06          ದಿನಾಂಕ : 31-5-05

### ಜ್ಞಾಪನಾ ಪತ್ರ

**ವಿಷಯ :-** 2005-06 ನೇ ಸಾಲಿನಲ್ಲಿ ಕೃಷ್ಣಾ ತೀರ ರೈತ ಸಂಘ (ರಿ) ಜಮಖಂಡಿ ಇವರ ವತಿಯಿಂದ ನಡೆಸಲ್ಪಡುವ ರಾಯಲ್ ಪ್ಯಾಲೇಸ್ ಸ್ಕೊಲ್‌ಗೆ ಕನ್ನಡ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು.

**ಉಲ್ಲೇಖ :** ಪ್ರಾಧಾನ ಕಾರ್ಯದರ್ಶಿ ಕೃಷ್ಣಾ ತೀರ ರೈತ ಸಂಘ ಜಮಖಂಡಿ ಇವರ ಪತ್ರ ದಿನಾಂಕ : 31-03-2005

---

**ಪೀಠಿಕೆ**

ಕೃಷ್ಣಾ ತೀರ ರೈತ ಸಂಘ ಜಮಖಂಡಿ ಶಿಕ್ಷಣ ಸಂಸ್ಥೆ ಇವರ ವತಿಯಿಂದ ಹೊಸದಾಗಿ ಖಾಸಗಿ ಶಾಶ್ವತ ಅನುದಾನ ರಹಿತ ಕನ್ನಡ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲು ಕೋರಿ ಅರ್ಜಿ ಸಲ್ಲಿಸಿರುವರು.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರೀ ಸಂಸ್ಥೆಯವರು ಶಾಲೆ ಪ್ರಾರಂಭಿಸುವ ಸ್ಥಳದಲ್ಲಿ ಸರಕಾರಿ ಶಾಲೆಗಳಾಗಲಿ ಅಥವಾ ಖಾಸಗಿ ಶಾಲೆಗಳಾಗಲಿ ಇರುವುದಿಲ್ಲ. ಕಾರಣ ಸದರಿ ಸ್ಥಳದಲ್ಲಿ ಶಾಲೆಯ ಅವಶ್ಯಕತೆ ಇರುವದರಿಂದ 2005-06 ನೇ ಸಾಲಿನಲ್ಲಿ ಕೃಷ್ಣಾ ತೀರ ರೈತ ಸಂಘ ಜಮಖಂಡಿ. ಇವರ ವತಿಯಿಂದ ಪ್ರಾರಂಭಿಸಲಿರುವ ರಾಯಲ್ ಪ್ಯಾಲೇಸ್ ಸ್ಕೊಲ್‌ಗೆ ಕನ್ನಡ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಯನ್ನು ರಾಮತೀರ್ಥ ಜಮಖಂಡಿಯಲ್ಲಿ ಪ್ರಾರಂಭಿಸಲು ಅನುಮತಿಯನ್ನು ನೀಡಬಹುದಾಗಿದೆ.

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಕೃಷ್ಣಾ ತೀರ ರೈತ ಸಂಘ ಜಮಖಂಡಿ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಲಿರುವ ರಾಯಲ್ ಪ್ಯಾಲೇಸ್ ಸ್ಕೂಲ್‌ಗೆ ಕನ್ನಡ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಯನ್ನು ರಾಮತೀರ್ಥ ಜಮಖಂಡಿಯಲ್ಲಿ 1 ರಿಂದ 5 ನೇ ತರಗತಿಯವರೆಗೆ ಏಕಕಾಲಕ್ಕೆ ನಡೆಸುವ ಶರತ್ತಿನೊಂದಿಗೆ 2005-06 ನೇ ಸಾಲಿಗಾಗಿ ಶಾಲೆಯನ್ನು ಪ್ರಾರಂಭಿಸಲು ಈ ಕೆಳಕಂಡ ಕರಾರುಗಳಿಗೊಳಪಟ್ಟು ಅನುಮತಿಯನ್ನು ನೀಡಲಾಗಿದೆ.

## ಕರಾರುಗಳು

1. ಶಾಲೆಯನ್ನು ಶಾಶ್ವತ ಅನುದಾನ ರಹಿತವಾಗಿ ನೆಡೆಸಲು ಅನುಮತಿ ನೀಡಿದೆ.
2. ಶಾಲೆಗೆ ಅಗತ್ಯವಿರುವ ಸ್ವಂತ ಕಟ್ಟಡವನ್ನು ಒಂದು ವರ್ಷದೊಳಗಾಗಿ ಕಟ್ಟಿಸತಕ್ಕದ್ದು.
3. ಶಾಲೆಗೆ ತರಬೇತಿ ಹೊಂದಿದ ಶಿಕ್ಷಕರನ್ನು ನೇಮಕ ಮಾಡಿಕೊಳ್ಳತಕ್ಕದ್ದು.
4. 1 ರಿಂದ 5 ನೇ ತರಗತಿಯವರೆಗೆ ಏಕಕಾಲಕ್ಕೆ ಶಾಲೆಯನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಿದೆ.
5. ಒಂದು ವರ್ಷದಲ್ಲಿ ಸ್ವಂತ ಕಟ್ಟಡ ಹೊಂದದೇ ಇದ್ದಲ್ಲಿ ಹಾಗೂ ಪೀಠೋಪಕರಣ, ಪಾಠೋಪಕರಣ, ಆಟೋಪಕರಣ ಗ್ರಂಥಾಲಯ ಪುಸ್ತಕ, ವಿಜ್ಞಾನ ಉಪಕರಣಗಳು ಹಾಗೂ ಇತರ ಮೂಲಭೂತ ಸೌಲಭ್ಯಗಳನ್ನು ಪೂರೈಸದೆ ಇದ್ದಲ್ಲಿ ನೊಂದಣಿ ಹಾಗೂ ಶಾಲೆ ನಡೆಸಲು ನೀಡಿದ ಅನುಮತಿ ಯನ್ನು ರದ್ದುಪಡಿಸಲಾಗುವುದು.
6. ಪ್ರತಿಯೊಂದು ವರ್ಗಕ್ಕೆ ರೂ: 500/- ಭದ್ರತಾ ನಿಧಿ ಇಡುವದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು.
ಜಮಖಂಡಿ

ಗೆ,

ಅಧ್ಯಕ್ಷರು.
ಕೃಷ್ಣಾ ತೀರ ರೈತ ಸಂಘ, ಜಮಖಂಡಿ

ಪ್ರತಿಯನ್ನು ಆದರ ಪೂರ್ವಕ ಮಾಹಿತಿಗಾಗಿ

ಮಾನ್ಯ ಉಪ ನಿರ್ದೇಶಕರು
ಸಾ.ಶಿ. ಇಲಾಖೆ, ಬಾಗಲಕೋಟ.